ಕುಡಿದುಕೊಂಡು ಊರೂರು ಅಲಿಯೋ ಊರು ಉಡಾಳಾಗಿದ್ನು. ಕಂಡ ಕಂಡವ್ರಾ ಬಾಯ್ಲಿ ಉಗುಳಿ ಉಪ್ಪಾಕಿಸಿಕೊಂಡ್ನು. ಭೀಮಪ್ಪನು ಆರು ಜನ ಮಕ್ಕಳಿಗೆ ಮದುವೆ ಮಾಡಿ ಸೊಸೆಯರನ್ನು ತಂದುಕೊಂಡಿದ್ದ. ಕರಿಯನಿಗೂ ಒಂದು ಮದುವೆ ಮಾಡಿದರೆ ಹೆನ್ತಿ ಮಾತು ಕೇಳಿ ಕೊಂಡು ಸರಿಹೋಗುತ್ತಾನೆಂದು, ಹಗಲು ರಾತ್ರಿ ಲೆಕ್ಕಾಚಾರವನ್ನು ಹಾಕುತ್ತ ಊರೂರು ಅಲೆದು ಹೆಣ್ಣನ್ನು ಹುಡುಕುವ ಪ್ರಯತ್ನಪಟ್ಟನು. ಅದರೆ ಕರಿಯನ ಬಗ್ಗೆ ತಿಳಿದ ಸುತ್ತ ಹತ್ತು ಹಳ್ಳಿಯವ್ರು ಅವನಿಗೆ ಹೆಣ್ಣು ಕೊಡಲು ಒಪ್ಪಲಿಲ್ಲ. ಕೊನೆಗೆ ಮುದ್ದೇಪುರದಲ್ಲಿ ಮಲತಾಯಿಯ ಮಗಳನ್ನು ಗೊತ್ತು ಮಾಡಿ ಬಂದರು. ಆ ದಿನವೇ ಯಜಮಾನರೆಲ್ಲಾ ಕೂಡಿ ಊರಿನಲ್ಲಿ ದುರುಗವ್ವನ ಜಾತ್ರೆ ಮಾಡಬೇಕೆಂದು ಊರ ಮುಂದಿನ ದುರುಗವ್ವನ ಗುಡೀಲಿ ಕಲತ್ರು. ಕುಂತು ಮಾತಾಡೋ ಹೊತ್ತಿನ್ಯಾಗ, ಪೂಜಾರಿಗೆ ದುರಗವ್ವ ಮೈಮೇಲೆ ಬಂದು 'ಇಂತ ದಿನ್ವೇ ನನ್ನ ಜಾತ್ರಿ ನಡಿಬೇಕೆಂದು' ಹೇಳಿ ಸೇರಿದ ಮಂದಿಯೊಳಗ ಗಡುವು ಕೊಟ್ಟು ಪೂಜಾರಿಯ ಮೈಚಳಿ ಬಿಡ್ತು. 'ಆ ಲೆಕ್ಕದಂತೆ ಮಾಡೋದೇ ನಮ್ಮ ಊರಿಗೆ ಒಳ್ಳೆದು' ಎಂದು ತೀರ್ಮಾನಿಸಿದ್ರು, 'ದುರುಗವ್ವನ ಗಡುವ್ನಂತೆ, ಒಂದು ತಿಂಗಳೊಳಗೆ, ಅಂದ್ರೇ ಮುಂದಿನ ಅಮಾವಾಸ್ಯೆಗೆ ಮಾಡಬೇಕೆಂದು' ನಿಶ್ಚಯ ಮಾಡಿಯೇ ಬಿಟ್ರು. ಇತ್ತ ಒಂದು ತಿಂಗಳೊಳಗೆ ಮಗನ ಮದುವೆ ಮಾಡಿ ಕೈ ತೊಳೆದುಕೊಳ್ಳಬೇಕೆಂದು ಇದ್ದ ಭೀಮಪ್ಪ, ಊರಿನವರ ಮಾತಿಗೆ ಅಂದು ಒಪ್ಪಿಕೊಂಡು ಬಂದಿದ್ದ. ಊರಿಗೆ ಚರಗ ತಿರುಗುವ ಕಾರ್ಯಕ್ಕೆ ಒಕ್ಕಣಿಕೆ ರೆಡಿ ಮಾಡಿಕೊಳ್ಳುವ ಸಲುವಾಗಿ ಮಗನ ಮದುವೆಗಿಂತ ಊರಿನಲ್ಲಿ ನಡೆಯುವ ಕಾರ್ಯ ಮುಖ್ಯವೆಂದು ಅರಿತ. ಹೊಲೆಯರ ಕೇರಿ ಭೀಮಪ್ಪನು ಚರಗದ ಬುಟ್ಟಿ ಹೊರುವುದಕ್ಕೆ ಬೇಕಾದ ಸಿದ್ಧತೆ ನಡೆಸಿಕೊಳ್ಳುವುದು ಹೇಗೆಂದು, ಊರಿನ ಹಿರೀರ್ನ ಕೇಳ್ದಾಗ ಬೋರೆಗೌಡ ಹೇಳ್ತಾನೆ: 'ನೋಡ್ಲೇ ಭೀಮ ನೀ ಒಂದು ತಿಂಗ್ಳು ಮನೇಲಿ ಮಡಿ ಮೈಲಿಗೆಯಿಂದಿದ್ದು, ಪ್ರತಿದಿನಾ ಬೆಳ್ಳಂಬೆಳಗ್ಗೆ ಎದ್ದು ತಣ್ಣೀರಿನಲ್ಲಿ ಸ್ನಾನ ಮಾಡಿಕೊಂಡು ದುರ್ಗವ್ವನಿಗೆ ಒಂದು ತಿಂಗ್ಳು ಕಾಲ ಗಂಡು ದೀಪ ಹಚ್ಚಿ, ಮಡಿಯಿಂದ ಪೂಜೆ ಮಾಡಿಸಬೇಕು, ಹೀಗೆ ಮಾಡಿದರೆ ಮಾತ್ರ ನೀನು ಆ ಚರಗದ ಬುಟ್ಟಿ ಹೊತ್ತು ಊರಿಗೆ ಚರಗ ಚೆಲ್ಲಿ, ನಿನ್ನ ಹೆಂಡತಿಗೆ ಜೀವ್ನ ಪೂರ್ತಿ ಕುಂಕುಮ ಇಡಲಿಕ್ಕೆ ಸಾಧ್ಯ. ನೀ ಅಪ್ಪಿ ತಪ್ಪಿ ಮಡಿ ಮೈಲಿಗೆಯನ್ನು ಮರೆತುಬಿಟ್ರೇ ಅಷ್ಟೇ' ಎಂದು ಕಾಲಜ್ಞಾನ ನುಡಿದ. ಅದಕ್ಕೆ ಊರಿನ ಯಜಮಾನರು ಹೌದೌದು ಎಂಬಂತೆ ಪುಸಲಾಯಿಸಿ ಎದ್ದು ಹೋದ್ರು.

* * *

ಊರಿನವರ ಮಾತಿನಂತೆ ಒಪ್ಪಿಕೊಂಡ ಭೀಮಪ್ಪ ಮನಸ್ನಲ್ಲಿ, 'ನಾನು ಚರಗ ತಿರುಗಿ ಪ್ರಾಣ ಉಳಿಸಿಕೊಳ್ಳುತ್ತೀನೋ ಇಲ್ವೋ ಖರೆಯಿಲ್ಲಾ, ಮಗನ ಮದುವೆ ಮಾಡಿಬಿಟ್ರೇ ಅವನಿಗೂ ಒಂದು ಸಂಸಾರ ಅಂಬೋದು ಅಗುತ್ತೇ ನಾನು ಇದ್ದರೇನೂ ಸತ್ತರೇನೂ. ಅಲ್ಲಿಗೆ ನನ್ನ ಕಥೆ ಮುಗೀತದೆ' ಎಂದುಕೊಂಡು ಎದೆಗುಂಡಿಗೆ ಬಿಗಿಯಿಡ್ದು, ಆದಿನ ರಾತ್ರಿಯೆಲ್ಲಾ ಚಿಂತಿಮಾಡಿ ಕೋಳಿ ಕೂಗೋ ಹೊತ್ತಿಗೆಲ್ಲ ಮುದ್ದೇಪುರದ ನೆಂಟರ ಮನೆ ಬಾಗಿಲು ಕಾದು ಕುಂತಿದ್ದ. ಬಾಗಿಲು ತೆಗೆದ್ರೆ ಸಂಕವ್ವನ ತಂದೆ ಮುಖ ಕಂಡಕೂಡ್ಲೇ ಭೀಮಪ್ಪ 'ನಮ್ಮೂರಾಗೆ ದುರ್ಗವ್ವನ ಜಾತ್ರೆ ಮಾಡತ್ತಾವರೇ. ಅದುಕ್ಕೆ ನಮ್ಮ ಕರಿಯನ ಮದುವೆ ನಮ್ಮೂರು ದುರ್ಗವ್ವನ ಗುಡಿಯಲ್ಲಿ ಇನ್ನು ಎಂಟು ದಿನದಲ್ಲಿ ಮಾಡಿ ಬಿಡೋಣ' ಎಂದು ಹೇಳಿದ. ಅದಕ್ಕೆ ಸಂಕವ್ವನ ತಂದೆ ಏನೋ ಹೇಳುತ್ತಿದ್ದಂತೆ, ಹಿಂದೆಯಿಂದ ಕೇಳಿಸಿಕೊಂಡ ಆತನ ಹೆಂಡ್ತಿ ಕೇಡು ಮುಂಡೆದು ಸಂಕಿ ತೊಲಗಿದ್ರೆ ಸಾಕೆಂಬಂತೆ, ಅಯ್ತು ಬಿಡಿ ಎಂದು ಹೇಳಿಯೇ ಬಿಟ್ಲೂ, ಸಂಕವ್ವನ ತಂದೆನೂ ಮೀಸೆಯಿದ್ರೂ, ನನ್ನದೇನೂ ನಡಿಯೊಲ್ಲೆಂದು ತಲೆಯಾಡಿಸಿ ಒಪ್ಪಿಗೆ ಕೊಟ್ನು. ಭೀಮಪ್ಪನು ಅಂದುಕೊಂಡ ಹಾಗೇ ಸಂಕವ್ವನನ್ನು ಗೆಜ್ಜೆಪುರದ ಕರಿಯನ ಜೊತೆ ಮದುವೆ ಮಾಡ್ಸಿ ಜೀವನದಲ್ಲಿ ಎಲ್ರೂ ಮದುವೆ ಮಾಡಿ ಗೆದ್ದು ಬಿಟ್ಟಂತೆ, ಗೆದ್ದುಬಿಟ್ಟೆವೆಂದು ನಿಶ್ಚಿಂತೆಯಿಂದ ಅಂದು ರಾತ್ರಿ ಮಲಗಿದ್ನು. ಅದರೂ ಎಲ್ಲೋ ಒಂದು ಕಡೆ ಊರ ಯಜಮಾನರು ಹೇಳಿದ ಕಟ್ಟುಪಾಡುಗಳನ್ನು ಮೀರಿದ್ದಕ್ಕೆ ಭಯಗೊಂಡು ನಮ್ಮವ್ವ ದುರ್ಗವ್ವನೇ ಕಾಪಾಡಬೇಕೆಂದುಕೊಂಡು, ಮಟಮಟ ಮಧ್ಯ ರಾತ್ರಿಯಲ್ಲಿ ಎದ್ದು ದಿನಾಲು ದುರ್ಗವ್ವನಿಗೆ ನೋಮು